OS No.144/2019
DW1

**<u>ದಿನಾಂಕಃ 13-07-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-</u>**

ನಾನು ಶಾಲೆ ಕಲಿತಿಲ್ಲ. ನನಗೆ ನೇತ್ರಮ್ಮ ಮತ್ತು ಆಕೆಯ ಗಂಡ ರಾಮಯ್ಯನವರ ಪರಿಚಯ ಇದೆ. ಕೆ.ಎಸ್.ರಾಮಯ್ಯ ಇತನು ನನ್ನ ಅಜ್ಜನ ತಮ್ಮನ ಮಗ. ನಮಗೆ ರಕ್ತ ಸಂಬಂಧಿಕರು ಎಂದರೆ ಸರಿ. ನಮ್ಮ ಮತ್ತು ಅವರ ಸಂಬಂಧ ಚೆನ್ನಾಗಿಯೇ ಇದೆ. ಸರ್ವೆ ನಂಬರ 22/4 ರಲ್ಲಿ ಒಟ್ಟು 7 ಎಕರೆ 29 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ಮೂಲದಲ್ಲಿ ವಾದಿಯ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ. ವಾದಿ ಗೋಸಣ್ಣ ಆತನ ಚಿಕ್ಕಪ್ಪ ಲಿಂಗಪ್ಪ ಮತ್ತು ಅಣ್ಣ ಸಿದ್ಧಪ್ಪ ಇವರುಗಳು ಸೇರಿ ಸದರಿ 7 ಎಕರೆ 29 ಗುಂಟೆ ಜಮೀನನ್ನು ಕೆ.ಎಸ್.ರಾಮಯ್ಯನವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟ 1963 ರಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಹೆಸರಿಗೆ ಖಾತೆ ಪಹಣಿಗಳು ಕೂಡಾ ಬಂದಿದ್ದವು ಎಂದರೆ ಸರಿ. ಕೆ.ಎಸ್.ರಾಮಯ್ಯನವರಿಗೆ ಮಾರಾಟ ಆಗುವ ಕಾಲಕ್ಕೆ ಎರಡನೇ ಪ್ರತಿವಾದಿ ಅಲ್ಪವಯಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಸಂರಕ್ಷನಾಗಿ ಸಿದ್ಧಪ್ಪನವರು ಖರೀದಿ ಪತ್ರಕ್ಕೆ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 7 ಎಕರೆ 29 ಗುಂಟೆ ಜಮೀನಿನ ಪೈಕಿ ಕೆ.ಎಸ್.ರಾಮಯ್ಯ ಇವರು 4 ಎಕರೆ 39 ಗುಂಟೆ ಜಮೀನನ್ನು ಎರಡನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 24-02-1979 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ರೇವಣ್ಣನವರು ಖರೀದಿ ಮಾಡಿದ ಜಮೀನಿನ ಪೂರ್ವಕ್ಕೆ ರಾಮಪ್ಪನವರ ಜಮೀನು, ಪಶ್ಚಿಮಕ್ಕೆ ವಾದಿ ಗೋಸಣ್ಣನವರ ಜಮೀನು, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಸರ್ಕಾರಿ ಗೋಮಾಳ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸ್ವಾಧೀನದಲ್ಲಿ ಎರಡನೇ ಪ್ರತಿವಾದಿ ರೇವಣ್ಣನವರೇ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಪ್ರತಿವಾದಿಗೆ ಮಾರಾಟ ಮಾಡಿದ ದಿನವೇ ಕೆ ಎಸ್ ರಾಮಯ್ಯನವರು ವಾದಿ ಗೋಸಣ್ಣನಿಗೆ 1 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಸ್ವಾಧೀನ ಇರುವ ಜಮೀನಿನ ದಕ್ಷಿಣ ಭಾಗದಲ್ಲಿ 1 ಎಕರೆ ಜಮೀನಿನಲ್ಲಿ ಗೋಸಣ್ಣನ ಮನೆಯವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನ ಪೂರ್ವಕ್ಕೆ ಎರಡನೇ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ಕೋಡಿಹಳ್ಳಿ ಸಿದ್ಧರಾಮಪ್ಪನವರು ಜಮೀನು ಇದೆ ಎಂದರೆ ಸರಿಯಲ್ಲ. ಈಗ ಅದರಲ್ಲಿ ರಾಮಕ್ಕ ಎಂಬುವರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನ ಉತ್ತರಕ್ಕೆ ಕೆ ಎಸ್ ರಾಮಯ್ಯನವರಿಗೆ ಮಾರಾಟ ಮಾಡಿದ ಸಿದ್ಧಣ್ಣನ

ಹಿಸ್ಸೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ಸಿದ್ದಣ್ಣನ ಹಿಸ್ಸೆ ಜಮೀನನ್ನು ಕೆ ಎಸ್ ರಾಮಯ್ಯನವರ ಕಡೆಯಿಂದ ನನ್ನ ತಂದೆ ಖರೀದಿ ಮಾಡಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 2 ಎಕರೆ 28 ಗುಂಟೆ ಜಮೀನನ್ನು ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಮೇಲೆ ಹೇಳಿದ ಜಮೀನಿನ ದಕ್ಷಿಣಕ್ಕೆ ಸರ್ಕಾರಿ ಗೋಮಾಳ ಇದೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಚೆಕ್ಕು ಬಂದಿಯ ಮದ್ಯೆದಲ್ಲಿ ಇರುವ 1 ಎಕರೆ ಜಮೀನಿನಲ್ಲಿ 1979 ನೇ ಸಾಲಿನಿಂದ ವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದನೇ ವಾದಿ ಗೋಸಣ್ಣ ಮತ್ತು ಎರಡನೇ ಪ್ರತಿವಾದಿ ರೇವಣ್ಣ ಜಮೀನು ಖರೀದಿ ಮಾಡಿದ ಮೇಲೆ ಅವರ ಹೆಸರಿಗೆ ವರ್ಗಾವಣೆ ಆದೇಶ ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾರಣ ಸದರಿ 7 ಎಕರೆ 29 ಗುಂಟೆ ಜಮೀನು ಕೆ ಎಸ್ ರಾಮಯ್ಯನವರ ಹೆಸನರಿಲ್ಲಿಯೇ ಎಂದರೆ ನನಗೆ ಗೊತ್ತಿಲ್ಲ. ಸದರಿಯವಗೆ ಮಾರಾಟ ಮಾಡಿದ ನಂತರ ಕೆ ಎಸ್ ರಾಮಯ್ಯನವರಿಗೆ ಕೇವಲ 1 ಎಕರೆ 30 ಗುಂಟೆ ಜಮೀನು ಮಾತ್ರ ಉಳಿದುಕೊಂಡಿತ್ತು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ನಮ್ಮ ತಂದೆಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿಯಲ್ಲ. ಕೆ ಎಸ್ ರಾಮಯ್ಯ ಮತ್ತು ನನ್ನ ತಂದೆ ಸಂಬಂಧಿಕರು ಇದ್ದ ಕಾರಣ 1 ಎಕರೆ 28 ಗುಂಟೆ ಜಮೀನಿನ ಬದಲಿಗೆ 2 ಎಕರೆ 28 ಗುಂಟೆ ಎಂದು ಖರೀದಿ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಖರೀದಿ ಮಾಡಿದ 1 ಎಕರೆ 28 ಗುಂಟೆ ಜಮೀನಿನಲ್ಲಿ ಮಾತ್ರ ನನ್ನ ತಂದೆ ಮತ್ತು ನಾವು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನಾವು ಯಾವತ್ತಿಗೂ 2 ಎಕರೆ 28 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಒಂದನೇ ವಾದಿ ಮತ್ತು ಎರಡನೇ ಪ್ರತಿವಾದಿಯ ಹೆಸರಿಗೆ ಖಾತೆ ಬರದೇ ಇರುವುದರ ದುರುಪಯೋಗ ಪಡೆದುಕೊಂಡು ನನ್ನ ತಂದೆ 2 ಎಕರೆ 28 ಗುಂಟೆ ಜಮೀನಿಗೆ ಖರೀದಿ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ನಮ್ಮ ಖರೀದಿ ಪತ್ರದಲ್ಲಿ ನಮ್ಮ ಜಮೀನಿನ ಪಶ್ಚಿಮಕ್ಕೆ ಸಿದ್ಧರಾಮಣ್ಣನವರ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ. ನಮ್ಮ ಜಮೀನಿನ ಉತ್ತರಕ್ಕೆ ಗೋಮಾಳ ಇದೆ ಎಂದರೆ ಸರಿ. ನಮ್ಮ ತಂದೆಯ ಹೆಸರಿಗೆ 2 ಎಕರೆ 28 ಗುಂಟೆ ಜಮೀನಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. 2 ಎಕರೆ 28 ಗುಂಟೆ ಜಮೀನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿ 4 ಎಕರೆ 39 ಗುಂಟೆ ಜಮೀನಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಯ ಹೆಸರಿಗೆ 2 ಗುಂಟೆ ಜಮೀನು ಖಾತೆ ಇದೆ ಎಂದರೆ ಸರಿ. ದಾಖಲೆಯ ಪ್ರಕಾರ ಒಂದನೇ ವಾದಿಗೆ ಜಮೀನು ಉಳಿದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನು ನಮ್ಮ 2 ಎಕರೆ 28 ಗುಂಟೆ ಜಮೀನಿನಲ್ಲಿ ಸೇರಿಕೊಂಡಿದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಈ ದಾವೆ ಹಾಕಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ

ಸೇರಿದ 1 ಎಕರೆ ಜಮೀನು ಭದ್ರಾ ಮೇಲ್ದಂಡೆ ಯೋಜನೆಗೆ ಭೂಸ್ವಾಧೀನ ಆಗಿದೆ ಎಂದರೆ ನಮ್ಮ ಜಮೀನು ಆಗಿದೆ. ನಮಗೆ ನೋಟಿಸ್ಸುಗಳು ಬಂದಿವೆ ಎಂದರೆ ಸರಿ. ಆ ಸಮಯದಲ್ಲಿ ಸರ್ವೆ ಅಧಿಕಾರಿಗಳು ಅಳತೆ ಮಾಡಲು ಬಂದಿದ್ದರು ಎಂದರೆ ಸರಿ. ಆ ನಂತರ ತಮ್ಮ ಜಮೀನು ಸ್ವಾಧೀನ ಆಗಿರುವುದು ವಾದಿಯರಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಜಮೀನು ಇರುವ ಕಾರಣ ಪರಿಹಾರದ ಹಣವನ್ನು ನಾವೇ ಪಡೆದುಕೊಳ್ಳಲು ಪ್ರಯತ್ನಿಸಿದ್ದೇವೆ ಎಂದರೆ ಸಾಕ್ಷಿಯು ನಮ್ಮ ಜಮೀನಿನ ಪರಿಹಾರ ನಾವು ಪಡೆದುಕೊಳ್ಳಲು ಪ್ರಯತ್ನಿಸಿದ್ದೇವೆ ಎಂದು ಹೇಳುತ್ತಾರೆ. ಅದೇ ಕಾರಣಕ್ಕೆ ಈ ದಾವೆ ಹಾಕಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ದಾವೆ ಹಾಕಲಾಗಿದೆ ಎನ್ನುತ್ತಾರೆ. ದಾವಾ ಆಸ್ತಿಗೆ ವಾದಿಗಳೇ ಮಾಲೀಕರು ಎಂದರೆ ಸರಿಯಲ್ಲ. ಅದಕ್ಕೆ ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ಎಕರೆ ಜಮೀನಿನಲ್ಲಿ ವಾದಿಗಳು ಬೆಳದಿದ್ದ ರಾಗಿ ಬೆಳೆಯನ್ನು 2020 ನೇ ಸಾಲಿನಲ್ಲಿ ನಾವು ಕಟಾವು ಮಾಡಿಕೊಳ್ಳಲು ಹೋಗಿದ್ದೆವು ಎಂದರೆ ಸಾಕ್ಷಿಯು ನಮ್ಮ ಜಮೀನಿಗೆ ನಾವು ಹೋಗಿದ್ದೆವು ಎನ್ನುತ್ತಾರೆ. ಈ ಬಗ್ಗೆ ವಾದಿಗಳು ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ನಾವು ಕೂಡಾ ಅವರ ಮೇಲೆ ದೂರು ಕೊಟ್ಟಿದ್ದೇವೆ ಎನ್ನುತ್ತಾರೆ. ನನ್ನ ತಮ್ಮ ರೇವಣ್ಣನ ಹೆಂಡತಿ ವಾದಿಯರ ಮೇಲೆ ದೂರು ಕೊಟ್ಟಿದ್ದಾಳೆ ಎಂದರೆ ಸರಿ. ನಮಗೆ ಸೇರಿದ 2 ಎಕರೆ 28 ಗುಂಟೆ ಜಮೀನಿನಲ್ಲಿ ವಾದಿಗಳು 19 ಗುಂಟೆ ಒತ್ತುವರಿ ಮಾಡಿದ್ದಾರೆ ಎಂದು ನಾವು ಇನ್ನೊಂದು ಪ್ರಕರಣ ಅಂದರೆ ಮೂಲ ದಾವೆ 53/2020 ಹಾಕಿದ್ದಾರೆ ಎಂದರೆ ಸರಿ.

ಈ ಹಂತದಲ್ಲಿ ಸಮಯದ ಅಭಾವದಿಂದ ಪಾಟೀ ಸವಾಲನ್ನು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ**
Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**

OS No.  144/2019
DW1